## ಕಾವ್ಯಸಂಕ



**ಆರಿಫ್ ರಾಜಾ**

ಕವಿ: **ಮಿಜ್ರಾ ಜಬ್ಬಾರ್** (1990)
ದೇಶ: **ಶ್ರೀಲಂಕಾ**



**ಶ್ರೀಲಂಕಾದ ಮಿಜ್ರಾ ಜಬ್ಬಾರ್** (1990) ತಮಿಳಿನಲ್ಲಿ ಬರೆಯುವ ಯುವ ಕವಯಿತ್ರಿ. ಸಿಂಹಳಿ-ಬೌದ್ಧ ಸಂಸ್ಕೃತಿಯ ದಟ್ಟ ಮಲೆನಾಡಿನ ಐತಿಹಾಸಿಕ ನಗರ ಕ್ಯಾಂಡಿ ಇವರ ಜನ್ಮಸ್ಥಳ. ಪ್ರಸ್ತುತ ವಾತೇಗಮ ಪನ್ವಿಲಾ ಎಂಬಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲಿನ ಹಸಿರು ಚಹಾದ ತೋಟಗಳು ಹಾಗೂ ಮಿಲಿಟರಿ ಜೀಪುಗಳು ಈ ಕವಯಿತ್ರಿಯ ಬಾಲ್ಯವನ್ನಷ್ಟೇ ಅಲ್ಲ, ಕಾವ್ಯವನ್ನೂ ರೂಪಿಸಿವೆ. 'ಒರು ಮಿದರು ಅಡರ್ ವೆನ್ಮೈ' ಎಂಬ ಹೆಸರಿನ ಕವನ ಸಂಕಲನ ಪ್ರಕಟವಾಗಿದೆ. ಇವರ ಕವಿತೆಗಳಲ್ಲಿ ಮೇಲುನೋಟಕ್ಕೆ ಸೂಫಿ ಸಾಹಿತ್ಯದ ಪ್ರಭಾವ ಕಂಡರೆ, ಆಳದಲ್ಲಿ ಇವು ಪ್ರಾಚೀನ ತಮಿಳು 'ಸಂಗಂ' ಸಾಹಿತ್ಯದ ವಚನ ಶೈಲಿಯ ಕಾವ್ಯವನ್ನು ಪ್ರತಿನಿಧಿಸುತ್ತಿವೆ.